ಹರಿಕಥಾಮೃಥಸಾರ

ಬಿಂಬೋಪಾಸನ ಸಂಧಿ

ಹರಿಕಥಾಮೃಥಸಾರ ಗುರುಗಳ ಕರುಣಧಿಮ್ದಾಪನಿಥು ಪೇಳುವೆ
ಪರಮ ಭಗವಧ್ಭಕ್ಥರಿಧನಾಧರಧಿ ಕೇಳುವುಧು

ಮುಕ್ತ ಬಿಂಬನು ತುರಿಯ ಜೀವ
ನ್ಮುಕ್ತಬಿಂಬನು ವಿಶ್ವ ಭವ ಸಂ
ಸಕ್ತ ಬಿಂಬನು ತೈಜಸನು ಅಸ್ಪೃಜ್ಯರಿಗೆ ಪ್ರಾಜ್ಞ
ಶಕ್ತನಾದರು ಸರಿಯೆ ಸವೋ
ದ್ರಿಕ್ತ ಮಹಿಮನು ದುಃಖಸುಖಗಳ
ವ್ಯಾಕ್ತಮಾಡುತಲಿಪ್ಪ ಕಲ್ಪಾಂತದಲಿ ಬಪ್ಪರಿಗೆ ೨೪-೦೧

ಅನ್ನನಾಮಕ ಪ್ರಕೃತಿಯೊಳಗ
ಚ್ಛಿನ್ನನಾಗಿಹ ಪ್ರಾಜ್ಞ ನಾಮದಿ
ಸೊನ್ನೊಡಲ ಮೊದಲಾದವರೊಳನ್ನಾದ ತೈಜಸನು
ಅನ್ನದಾಂಬುದನಾಮ ವಿಶ್ವನು
ಭಿನ್ನನಾಮ ಕ್ರಿಯಗಳಿಂದಲಿ
ತನ್ನೊಳಗೆ ತಾ ರಮಿಪ ಪೂಣಾನಂದ ಜ್ಞಾನಘನ ೨೪-೦೨

ಬೂದಿಯೊಳಗಡಗಿಪ್ಪನಲನೋ
ಪಾದಿ ಚೇತನ ಪ್ರಕೃತಿಯೊಳ
ಗನ್ನಾದನನ್ನಾಹ್ವಯದಿ ಕರೆಸುವ ಬ್ರಹ್ಮ ಶಿವರೂಪಿ

ಓದನಪ್ರದ ವಿಷ್ಣು ಪರಮಾ
ಹ್ಲಾದವೀವುತ ತೃಪ್ತಿಪಡಿಸುವ
ಗಾದಮಹಿಮನ ಚಿತ್ರಕಮವನಾವ ಬಣ್ಣಿಸುವ ೨೪-೦೩

ನಾದ ಭೋಜನ ಶಬ್ದದೊಳು ಬಿಂ
ದೋದನೋದಕದೊಳಗೆ ಘೋಷನು
ವಾದದೊಳು ಶಾಂತಾಖ್ಯ ಜಠರಾಗ್ನಿಯೊಳಗಿಃರುತಿಪ್ಪ
ವೈದಿಕಸುಶಬ್ದದೊಳು ಪುತ್ರ ಸ
ಹೋದರಾನುಜರೊಳತಿ
ಶಾಂತನ ಪಾದಕಮಲವನವರತ ಚಿಂತಿಸು ಈ ಪರಿಯಲಿಂದ ೨೪-೦೪

ವೇದಮಾನಿ ರಮಾನುಪಾಸ್ಯ ಗು
ಣೋದಧಿ ಗುಣತ್ರಯ ವಿವಜಿತ
ಸ್ವೋದರಸ್ಥಿತ ನಿಖಿಳ ಬ್ರಹ್ಮಾಂಡಾದ್ವಿಲಅಣನು
ಸಾಧುಸಮ್ಮತವೆನಿಸುತಿಹ ನಿಷು
ಸೀದ ಗಣಪತಿಯೆಂಬ ಶ್ರುತಿ ಪ್ರತಿ
ಪಾದಿಸುವುದನವರತವನ ಗುಣಪ್ರಾಂತಗಾಣದಲೆ ೨೪-೦೫

ಕರೆಸುವನು ಮಾಯಾರಮಣ ತಾ
ಪುರುಷರೂಪದಿ ತ್ರಿಸ್ಥಳಗಳೊಳು
ಪರಮ ಸತ್ಪುರುಷಾಥದ ಮಹತ್ತತ್ವದೊಳಗಿದ್ದು
ಸರಸಿಜಭವಾಂಡ ಸ್ಥಿತ ಸ್ತ್ರೀ
ಪುರುಷ ತನ್ಮಾತ್ರಗಳ ಏಕೋ

ತ್ತರದಶೇಂದ್ರಿಯಗಳ ಮಹಾಬೂತಗಳ ನಿಮಿಸಿದ ೨೪-೦೬

ಈ ಶರೀರಗೆ ಪುರುಷ ತ್ರಿಗುಣದಿ
ಶ್ರೀಸಹಿತ ತಾನಿದ್ದು ಜೀವರಿ
ಗಾಶ ಲೋಭಾಜ್ಞ್ಯಾನ ಮದ ಮತ್ಸರ ಕುಮೋಹ ಉಧ
ಹಾಸ ಹರುಷ ಸುಷುಪ್ತಿ ಸ್ವಪ್ನಪಿ
ಪಾಸಜಾಗ್ರತಿ ಜನ್ಮ ಸ್ಥಿತಿ ಮೃತಿ
ದೋಷ ಪುಣ್ಯ ಜಯಾಪಜಯ ದ್ವಂದ್ವಗಳ ಕಲ್ಪಿಸಿದ ೨೪-೦೭

ರಿವಿಧ ಗುಣಮಯ ದೇಹ ಜೀವಕೆ
ಕವಚದಂದದಿ ತೊಡಿಸಿ ಕಮ
ಪ್ರವಹದೊಳು ಸಂಚಾರಮಾಡಿಸುತಿಪ್ಪ ಜೀವರನ
ಕವಿಸಿ ಮಾಯಾರಮಣ ಮೋಹವ
ಭವಕೆ ಕಾರಣನಾಗುವನು ಸಂ
ಶ್ರವಣ ಮನನವ ಮಾಳ್ಪರಿಗೆ ಮೋಚಕನೆನಿಸುತಿಪ್ಪ ೨೪-೦೮

ಸಾಶನಾಹ್ವಯ ಸ್ತ್ರೀಪುರುಷರೊಳು
ವಾಸವಾಗಿಹನೆಂದರಿದು ವಿ
ಶ್ವಾಸಪೂವಕ ಭಜಿಸಿ ತೋಷಿಸು ಸ್ವಾವರೋತ್ತಮರ
ಕ್ಲೇಶನಾಶನ ಅಚಲಗಳೊಳು ಪ್ರ
ಕಾಶಿಸುತಲಿಹನಶನರೂಪೋ
ಪಾಸನವ ಮಾಳ್ಪರಿಗೆ ತೋಪನು ತನ್ನ ನಿಜರೂಪ ೨೪-೦೯

ಪ್ರಕಾರಾಂತರ ಚಿಂತಿಸುವದೀ
ಪ್ರಕೃತಿಯೊಳು ವಿಶ್ವಾದಿರೂಪವ
ಪ್ರಕಟಮಾಳ್ಪೆನು ಯಥಾಮತಿಯೊಳು ಗುರುಕೃಪಾಬಲದಿ
ಮುಕುರನಿಮಿತ ಸದದೊಳು ಪೋಗೆ
ಸ್ವಕೀಯ ರೂಪವ ಕಾಂಬ ತೆರದಲಿ
ಅಕುಟಿಲಾತ್ಮ ಚರಾಚರದಿ ಸವತ್ರ ತೋರುವನು ೨೪-೧೦

ಪರಿಚ್ಛೇದತ್ರಯ ಪ್ರಕೃತಿಯೊಳ
ಗಿರುತಿಹನು ವಿಶ್ವಾದಿರೂಪವ
ಧರಿಸಿ ಆತ್ಮಾದಿತ್ರಿರೂಪವ ಈ ಷಣತ್ರಯದಿ
ಸುರುಚಿ ಜ್ಞಾನಾತ್ಮ ಸ್ವರೂಪದಿ
ತುರಿಯನಾಮಕ ವಾಸುದೇವನ
ಸ್ಮರಿಸು ಮುಕ್ತಿಸುಖಪ್ರದಾಯಕನೀತನಹುದೆಂದು ೨೪-೧೧

ಕಮಲಸಂಭವಜನಕ ಜಡ ಜಂ
ಗಮರೊಳಗೆ ನೆಲೆಸಿದ್ದು ಕ್ರಮ ವ್ಯ
ತ್ಕ್ರಮದಿ ಕಮವ ಮಾಡಿ ಮಾಡಿಸುತಿಪ್ಪ ಬೇಸರದೆ
ಅಮ ಆಮ ಅಮೀಹನಾಹ್ವಯ
ಸುಮನಸಸುರರೊಳಗೆ ಅಹಂ
ಮಮನ ಮಮ ಎಂದೀ ಯುಪಾಸನೆಗೈವ ಪ್ರಾಂತದಲಿ ೨೪-೧೨

ಈ ಸಮಸ್ತ ಜಗತ್ತು ಈಶಾ
ವಾಸ್ಯವೆನಿಪುದು ಕಾಯರೂಪವು

www.yousigma.com

ನಾಶವಾದರು ನಿತ್ಯವೇ ಸರಿ ಕಾರಣ ಪ್ರಕೃತಿ
ಶ್ರೀಶಗೆ ಜಡಪ್ರತಿಮೆಯೆನಿಪುದು
ಮಾಸದೊಮ್ಮೆಗು ಸನ್ನಿಧಾನವು
ವಾಸವಾಗಿಹ ನಿತ್ಯ ಶಾಲಿಗ್ರಾಮದೋಪಾದಿ ೨೪-೧೩

ಏಕಮೇವಾದ್ವಿತೀಯ ರೂಪಾ
ನೇಕ ಜೀವರೊಳಿದ್ದು ತಾ ಪ್ರ
ತ್ಯೇಕ ಕಮವ ಮಾಡಿ ಮೋಹಿಸುತಿಪ್ಪ ತಿಳಿಸದಲೆ
ಮೂಕ ಬಧಿರಾಂಧಾದಿ ನಾಮಕ
ಈ ಕಳೇವರದೊಳಗೆ ಕರೆಸುವ
ಮಾಕಳತ್ರನ ಲೌಕಿಕ ಮಹಾಮಹಿಮೆಗೇನೆಂಬೆ ೨೪-೧೪

ಲೋಕಬಂಧುಲೋಕನಾಥ ವಿ
ಶೋಕ ಭಕ್ತರ ಶೋಕನಾಶನ
ಶ್ರೀಕರಾಚಿತ ಸೋಕದಂದದಲಿಪ್ಪ ಸವರೊಳು
ಸಾಕುವನು ಸಜ್ಜನರ ಪರಮ ಕೃ
ಪಾಕರೇಶ ಪಿನಾಕಿಸನ್ನುತ
ಸ್ವೀಕರಿಸು ವಾನತರು ಕೊಟ್ಟ ಸಮಸ್ತ ಕಮಗಳ ೨೪-೧೫

ಅಹಿತ ಪ್ರತಿಮೆಗಳೆನಿಸುವುವು
ದೇಹ ಗೇಹಾಪತ್ಯ ಸತಿ ಧನ
ಲೋಹ ಕಾಷ್ಟ ಶಿಲಾ ಮೃದಾತ್ಮಕವಾದ ದ್ರವ್ಯಗಳು
ಸ್ನೇಹದಲಿ ಪರಮಾತ್ಮ ಎನಗಿ

www.yousigma.com

ತ್ರೀಹನೇಂದರಿದನುದಿನದಿ ಸ
ಮ್ಮೋಹಕೊಳಗಾಗದಲೆ ಪೂಜಿಸು ಸವನಾಮಕ ೨೪-೧೬

ಶ್ರೀತರುಣಿವಲ್ಲಭಗೆ ಜೀವರು
ಚೇತನಪ್ರತಿಮೆಗಳು ಓತ
ಪ್ರೋತನಾಗಿದ್ದೆಲ್ಲರೊಳು ವ್ಯಾಪಾರ ಮಾಡುತಿಹ
ಹೋತ ಸವೆಂದ್ರಿಯಗಳೊಳು ಸಂ
ಪ್ರೀತಿಯಿಂದುಂಡುಣಿಸಿ ವಿಷಯ ನಿ
ವಾತ ದೇಶಗ ದೀಪದಂದದಲಿಪ್ಪ ನಿಭಯದಿ ೨೪-೧೭

ಭುತ ಸೋಕಿದ ಮಾನವನು ಬಹು
ಮಾತನಾಡುವ ತೆರದಿ ಮಹದ
ದ್ಭೂತ ವಿಷ್ಣ್ವಾವೇಶದಿಂದಲಿ ವತಿಪುದು ಜಗವು
ಕೈತವೋಕ್ತಿಗಳಲ್ಲ ಶೇಷ ಫ
ಣಾತಪತ್ರಗೆ ಜೀವಪಂಚಕ
ವ್ರಾತವೆಂದಿಗು ಭಿನ್ನಪಾದಾಹ್ವಯದಿ ಕರೆಸುವುದು ೨೪-೧೮

ದಿವಿಯೊಳಿಪ್ಪುವು ಮೂರು ಪಾದಗ
ಳವನಿಯೊಳಗಿಹುದೊಂದು ಈ ವಿಧ
ಕವಿಭಿರೀಡಿತ ಕರೆಸುವ ಚತುಷ್ಪಾತು ತಾನೆಂದು
ಇವನ ಪಾದಚತುಷ್ಟಯಗಳನು
ಭವಕೇ ತಂದು ನಿರಂತರದಿ ಉ
ದ್ಧವನ ಸಖ ಸವಾಂತರಾತ್ಮಕನೆಂದು ಸ್ಮರಿಸುತಿರು ೨೪-೧೯

ವಂಶಬಾಗಲು ಬೆಳೆಯ ಕಂಡು ನ
ರಾಂಶದಲಿ ಶೋಭಿಪುದು ಬಾಗದ
ವಂಶ ಪಾಶದಿ ಕಟ್ಟಿ ಏರುವ ಡೊಂಬ ಮಸ್ತಕಕೆ
ಕಂಸಮದನ ದಾಸರಿಗೆ ನಿ
ಸ್ಸಂಶಯದಿ ವಂದಿಸದೆ ನಾ ವಿ
ದ್ವಾಂಸನೆಂದಹಂಕರಿಸೆ ಭವಗುಣದಿ ಬಂಧಿಸುವ ೨೪-೨೦

ಜ್ಯೋತಿರೂಪಗೆ ಪ್ರತಿಮೆಗಳು ಸಾಂ
ಕೇತಿಕಾರೋಪಿತ ಸುಪೌರುಷ
ಧಾತು ಸಪ್ತಕ ಧೈಯ ಶೌಯೋದಾಯ ಚಾತುಯ
ಮಾತು ಮಾನ ಮಹತ್ವ ಸಹನ ಸು
ನೀತಿ ನಿಮಲದೇಶ ಬ್ರಾಹ್ಮಣ
ಭೂತಪಂಚಕ ಬುದ್ಧಿ ಮೊದಲಾದಿಂದ್ರಿಯ ಸ್ಥಾನ ೨೪-೨೧

ಜೀವರಾಶಿಯೊಳಮೃತ ಶಾಶ್ವತ
ಸ್ಥಾವರಗಳೊಳು ಸ್ಥಾಣುನಾಮಕ
ನಾವಕಾಲದಲಿಪ್ಪನಜಿತಾಂತನೇಂದೆನಿಸಿ
ಗೋವಿದಾಂಪತಿ ಗಾಯನಪ್ರಿಯ
ಸಾವಯವ ಸಾಹಸ್ರನಾಮ ಪ
ರಾವರೇಶ ಪವಿತ್ರಕಮ ವಿಪಶ್ಚಿತನು ಸಾಮ ೨೪-೨೨

ಮಾಧವನ ಪೂಜಾಥವಾಗಿ ನಿ

ಷೇಧಕಮವ ಮಾಡಿ ಧನ ಸಂ
ಪಾದಿಸಲು ಸತ್ಪುಣ್ಯ ಕಮಗಳೆನಿಸಿಕೊಳುತಿಹವು
ಸ್ವೋದರಂಭಣಾಥ ನಿತ್ಯದಿ
ಸಾಧುಕಮ ಮಾಡಿದರು ಸರಿ
ಐದುವನು ದೇಹಾಂತರವ ಸಂದೇಹವಿನಿತಿಲ್ಲ ೨೪-೨೩

ಅಪಗತಾಶ್ರಯ ಎಲ್ಲರೊಳಗಿ
ದ್ದುಪಮನೆನಿಪಾನುಪಮ ರೂಪನು
ಶಫರಕೇತನ ಜನಕ ಮೋಹಿಪ ಮೋಹಕನ ತೆರದಿ
ತಪನಕೋಟಿ ಸಮಪ್ರಭಾಸಿತ
ವಪುವೆನಿಪ ಕೃಷ್ಣಾದಿ ರೂಪಕ
ವಿಪಗಳಂತುಂಡುಣಿಪ ಸವತ್ರದಲಿ ನೆಲಸಿದ್ದು ೨೪-೨೪

ಅಡವಿಯೊಳು ಬಿತ್ತದಲೆ ಬೆಳೆದಿಹ
ಗಿಡದ ಮೂಲಿಕೆ ಸಕಲ ಜೀವರ
ಒಡಲೊಳಿಪ್ಪಾಮಯವ ಪರಿಹರಗೈಸುವಂದದಲಿ
ಜಡಜಸಂಭವಜನಕ ತ್ರಿಜಗ
ದ್ವಡೆಯ ಸಂತೈಸೆನಲು ಅವರಿ
ದ್ದೆಡೆಗೆ ಬಂದೊದಗುವನು ಭಕ್ತರ ಭಿಡೆಯ ಮೀರದಲೆ ೨೪-೨೫

ಶ್ರೀನಿಕೇತನ ತನ್ನವರ ದೇ
ಹಾನುಬಂಧಿಳಂತೆ ಅವ್ಯವ
ಧಾನದಲಿ ನೆಲಿಸಿಪ್ಪ ಸವದ ಸಕಲ ಕಾಮದನು

ಏನು ಕೊಟ್ಟದು ಭುಂಜಿಸುತ ಮ
ದ್ದಾನೆಯಂದದಿ ಸಂಚರಿಸು ಮ
ತ್ತೇನು ಬೇಡದೆ ಭಜಿಸುತಿರು ಅವನಂಘ್ರಿಕಮಲಗಳ ೨೪-೨೬

ಬೇಡದಲೆ ಕೊಡುತಿಪ್ಪ ಸುರರಿಗೆ
ಬೇದಿದರೆ ಕೊಡುತಿಹನು ನರರಿಗೆ
ಬೇದಿ ಬಳಲುವ ದೈತ್ಯರಿಗೆ
ಕೊಡನೊಮ್ಮೆ ಪುರುಷಾಥ
ಮೂಢರನುದಿನ ಧಮಕಮವ
ಮಾಡಿದರು ಸರಿ ಅಹಿಕಫಲಗಳ
ನೀಡಿ ಉನ್ಮತ್ತರನು ಮಾಡಿ ಮಹಾನಿರಯವೀವ ೨೪-೨೭

ತರಣಿ ಸವತ್ರದಲಿ ಕಿರಣವ
ಹರಹಿ ತತ್ತದ್ವಸ್ತುಗಳನನು
ಸರಿಸಿ ಅದರದರಂತೆ ಚಾಯವ ಕಂಗೊಳಿಪ ತೆರದಿ
ಅರಿಧರಾಜಾನೇಜ ಜಗದೊಳ
ಗಿರುವ ಛಾಯಾತಪನೆನಿಸಿ ಸಂ
ಕರುಷಣಾಹ್ವಯ ಅವರವರ ಯೋಗ್ಯತೆಗಳಂತಿಪ್ಪ ೨೪-೨೮

ಈ ವಿಧದಿ ಸವತ್ರ ಲಕುಮೀ
ಭೂ ವನಿತೆಯರ ಕೂಡಿ ತನ್ನ ಕ
ಳಾವಿಶೇಷಗಳೆಲ್ಲ ಕಡೆಯಲಿ ತುಂಬಿ ಸೇವ್ಯತಮ
ಸೇವಕನು ತಾನೆನಿಸಿ ಮಾಯಾ

ದೇವಿರಮಣ ಪ್ರವಿಷ್ಟರೂಪಕ
ಸೇವೆ ಮಾಳ್ಪ ಶರಣ್ಯ ಶಾಶ್ವತಕರುಣಿ ಕಮಲಾಅ ೨೪-೨೯

ಪ್ರಣವಕಾರಣ ಕಾಯ ಪ್ರತಿಪಾ
ದ್ಯನು ಪರಾತ್ಪರ ಚೇತನಾಚೇ
ತನ ವಿಲಅಣನಂತಸತ್ಕಲ್ಯಾಣ ಗುಣಪೂಣ
ಅನುಪಮನುಪಾಸಿತ ಗುಣೋದಧಿ
ಅನಘ ಅಜಿತಾನಂತ ನಿಷ್ಕಿಂ
ಜನಪ್ರಿಯ ನಿವಿಕಾರ ನಿರಾಶ್ರಯಾವ್ಯಕ್ತ ೨೪-೩೦

ಗೋಪ ಭೀಯ ಭವಾಂಧಕಾರಕೆ
ದೀಪವೊದಗೆ ಸಕಲ ಸುಖಸದ
ನೋಪರಿಗ್ರಹವೆನಿಸುತಿಪ್ಪುದು ಹರಿಕಥಾಮೃತವು
ಗೋಪತಿ ಜಗನ್ನಾಥವಿಟ್ಠಲ ಸ
ಮೀಪದಲಿ ನೆಲೆಸಿದ್ದು ಭಕ್ತರ
ನಾಪವಗರ ಮಾಡುವನು ಮಹದುಃಖಭವದಿಂದ ೨೪-೩೧

www.yousigma.com